सत्यमेव जयते

# ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ

## ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಕೇಂದ್ರ ಪುರಸ್ಕೃತ ಉಪಯೋಜನೆಯಡಿಯಲ್ಲಿ ಫಲಾನುಭವಿ ಆಧಾರಿತ ಘಟಕಗಳು / ಚಟುವಟಿಕೆಗಳು









ಭಾರತ ಸರ್ಕಾರ
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ
ಮೀನುಗಾರಿಕೆ ಇಲಾಖೆ



# ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆ

## ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಕೇಂದ್ರ ಪುರಸ್ಕೃತ ಉಪಯೋಜನೆಯಡಿಯಲ್ಲಿ ಫಲಾನುಭವಿ ಆಧಾರಿತ ಘಟಕಗಳು / ಚಟುವಟಿಕೆಗಳು


ಭಾರತ ಸರ್ಕಾರ
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ
ಮೀನುಗಾರಿಕೆ ಇಲಾಖೆ



ಡಾ॥ ರಾಜೀವ್ ರಂಜನ್, ಭಾ.ಆ.ಸೇ
ಕಾರ್ಯದರ್ಶಿ

ಮೀನುಗಾರಿಕೆ ಇಲಾಖೆ
ಪಶುಸಂಗೋಪನೆ, ಹೈನುಗಾರಿಕೆ ಮತ್ತು
ಮೀನುಗಾರಿಕೆ ಸಚಿವಾಲಯ
ಕೃಷಿಭವನ, ನವದೆಹಲಿ – 110 001

सत्यमेव जयते

# ಮುನ್ನುಡಿ

ಆತ್ಮೀಯರೇ,

ಭಾರತ ಸರ್ಕಾರದ ಮೀನುಗಾರಿಕಾ ಇಲಾಖೆಯು ಇತ್ತೀಚೆಗೆ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಎಂಬ ಹೊಸ ಯೋಜನೆಯನ್ನು ರೂ. 20,050 ಕೋಟಿ ಹೂಡಿಕೆಯಲ್ಲಿ ಜಾರಿಗೆ ತಂದಿದೆ ಎಂದು ತಿಳಿಸಲು ಹರ್ಷಿಸುತ್ತೇನೆ. ಈ ಯೋಜನೆಯನ್ನು ಮೀನುಗಾರಿಕೆ ಮೌಲ್ಯ ಸರಪಳಿಯಲ್ಲಿ ಮೀನು ಉತ್ಪಾದನೆಯಿಂದ ಬಳಕೆಯವರೆಗೆ ವೈವಿಧ್ಯಮಯ ಸೌಲಭ್ಯಗಳನ್ನು ಒದಗಿಸಲು ರೂಪಿಸಲಾಗಿದೆ. ಪಿಎಂಎಂಎಸ್‌ವೈ ನಮ್ಮ ದೇಶದ ಮೀನುಗಾರಿಕೆ ಕ್ಷೇತ್ರದ ಇತಿಹಾಸದಲ್ಲಿಯೇ ಅತಿದೊಡ್ಡ ಯೋಜನೆಯಾಗಿದೆ. ಫಲಾನುಭವಿ ಆಧಾರಿತ ಚಟುವಟಿಕೆಗಳನ್ನು ಕೈಗೊಳ್ಳಲು 12,340 ಕೋಟಿ ರೂ.ಗಳ ಹೂಡಿಕೆಯನ್ನು ಪಿಎಂಎಂಎಸ್‌ವೈ ಅಡಿ ಯೋಜಿಸಿದೆ ಎಂದು ತಿಳಿಸಲು ನಾನು ಹರ್ಷಿತನಾಗಿದ್ದೇನೆ.

ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವ ಗುರಿಯೊಂದಿಗೆ ಮೀನುಗಾರರು, ಮೀನು ಕೃಷಿಕರು, ಯುವಕರು, ಮಹಿಳೆಯರು, ಉದ್ಯಮಿಗಳ ಅನುಕೂಲಕ್ಕಾಗಿ ಪಿಎಂಎಂಎಸ್‌ವೈ ಅಡಿ ವ್ಯಾಪಕವಾದ ಚಟುವಟಿಕೆಗಳಿಗೆ ಉತ್ತೇಜನ ನೀಡಲಾಗುವುದು. ಈ ಯೋಜನೆಯಲ್ಲಿ ಹ್ಯಾಚರಿ ಕೇಂದ್ರಗಳ ಸ್ಥಾಪನೆ, ಪುನರಾವರ್ತಿತ ಜಲಕೃಷಿ ವ್ಯವಸ್ಥೆ (ಆರ್.ಎ.ಎಸ್), ಬಯೋಫ್ಲಾಕ್, ಅಕ್ವಾಪೋನಿಕ್ಸ್, ಸಮದ್ರ ಮತ್ತು ಜಲಾಶಯಗಳಲ್ಲಿ ಪಂಜರದ ಮೀನು ಕೃಷಿ, ಕ್ಷಾರೀಯ ಮತ್ತು ಲವಣಯುಕ್ತ ಪ್ರದೇಶಗಳಲ್ಲಿ ಜಲಕೃಷಿ ಅಭಿವೃದ್ಧಿ, ಅಲಂಕಾರಿಕ ಮೀನುಗಾರಿಕೆ, ಕಡಲಕಳೆ ಕೃಷಿ, ಶೀತಲ ಸರಪಳಿ, ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್, ನಗರ ಮಾರುಕಟ್ಟೆ ಸರಪಳಿಗಳು, ಮೌಲ್ಯವರ್ಧನೆ, ಸ್ಟಾರ್ಟ್‌ಅಪ್, ಇನ್ಕ್ಯುಬೇಟರ್, ನಾವೀನ್ಯತೆ, ಪತ್ತೆಹಚ್ಚುವಿಕೆ ಮತ್ತು ಪ್ರಮಾಣೀಕರಣ ಇತ್ಯಾದಿ ಚಟುವಟಿಕೆಗಳು ಒಳಗೊಂಡಿರುತ್ತವೆ. ಈ ಯೋಜನೆಯು ಕ್ಲಸ್ಟರ್ ಅಭಿವೃದ್ಧಿ, ಆರ್ಥಿಕತೆಯ ಪ್ರಮಾಣ, ಮೀನುಗಾರಿಕೆ ಕ್ಷೇತ್ರದ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದಲ್ಲದೇ ಪಾಲುದಾರರಿಗೆ ಹೆಚ್ಚಿನ ಆದಾಯವನ್ನು ನೀಡುವ ಅವಕಾಶವನ್ನು ಒದಗಿಸುತ್ತದೆ. ಸಂಘಟಿತ ರೀತಿಯಲ್ಲಿ ಕ್ಷೇತ್ರದ ಬೆಳವಣಿಗೆ ಮತ್ತು ವಿಸ್ತರಣೆಯನ್ನು ತೀವ್ರಗೊಳಿಸಿ ಪಿಎಂಎಂಎಸ್ ಯೋಜನೆಯು ಉದ್ಯಮಶೀಲತೆಯ ಅಭಿವೃದ್ಧಿಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತದೆ ಮತ್ತು ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಉತ್ತೇಜಿಸುತ್ತದೆ.

ಪಾಲುದಾರರ ಅನುಕೂಲಕ್ಕಾಗಿ, ಮೀನುಗಾರಿಕೆ ಇಲಾಖೆಯು ಪಿಎಂಎಂಎಸ್‌ವೈ ಅಡಿಯಲ್ಲಿ ಬೆಂಬಲಿಸುವ ಫಲಾನುಭವಿ ಆಧಾರಿತ ಚಟುವಟಿಕೆಗಳ ಪಟ್ಟಿಯನ್ನು ಸಂಕಲನಗೊಳಿಸಿ ಹೊರತಂದಿದೆ.

ಹೆಚ್ಚಿನ ಮಾಹಿತಿಗಾಗಿ ಮತ್ತು ಸಂದೇಹಗಳ ಪರಿಹಾರಕ್ಕಾಗಿ ಮೀನುಗಾರಿಕೆ ಇಲಾಖೆ, ಭಾರತ ಸರ್ಕಾರ ಮತ್ತು ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯನ್ನು ಈ ಸಂಕಲನದಲ್ಲಿ ನೀಡಲಾಗಿರುವ ವಿಳಾಸಗಳಲ್ಲಿ ಮತ್ತು ಟೋಲ್–ಫ್ರೀ ಸಂಖ್ಯೆಯಲ್ಲಿ ಸಂಪರ್ಕಿಸಬಹುದು.

ಎಲ್ಲಾ ಪಾಲುದಾರರಿಗೆ ಈ ಮಾಹಿತಿಯು ಉಪಯುಕ್ತವಾಗಲಿದೆ ಎಂದು ನಾನು ಭಾವಿಸುತ್ತೇನೆ.

R Ranjan 10/8/2020

ಡಾ॥ ರಾಜೀವ್ ರಂಜನ್



## ಪ್ರಧಾನಮಂತ್ರಿ ಮತ್ಸ್ಯಸಂಪದ ಯೋಜನೆಯ ಕೇಂದ್ರ ಪುರಸ್ಕೃತ ಉಪಯೋಜನೆ ಯಡಿಯಲ್ಲಿ ಫಲಾನುಭವಿ ಆಧಾರಿತ ಘಟಕಗಳು / ಚಟುವಟಿಕೆಗಳು

### 1. ಪರಿಚಯ

1.1 ಮೀನುಗಾರಿಕೆ ವಲಯವು ಉದ್ಯೋಗ, ಆಹಾರ ಮತ್ತು ಪೌಷ್ಠಿಕಾಂಶದ ಭದ್ರತೆ, ವಿದೇಶಿ ವಿನಿಮಯ ಗಳಿಕೆ ಮತ್ತು ಲಕ್ಷಾಂತರ ಜನರಿಗೆ, ವಿಶೇಷವಾಗಿ ಗ್ರಾಮೀಣ ಜನರಿಗೆ ಆದಾಯದ ಪ್ರಮುಖ ಕೊಡುಗೆ ನೀಡುತ್ತಿರುವ ಕಾರಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಮೀನುಗಾರಿಕೆ ಮತ್ತು ಜಲಕೃಷಿಯು ಪ್ರಮುಖ ಪಾತ್ರ ವಹಿಸುತ್ತಿದೆ. ಈ ವಲಯವು ಪ್ರಾಥಮಿಕ ಹಂತದಲ್ಲಿ ಸುಮಾರು 2.80 ಕೋಟಿ ಮೀನುಗಾರರು ಮತ್ತು ಮೀನು ಕೃಷಿಕರಿಗೆ ಜೀವನಾಂಶವನ್ನು ಒದಗಿಸುತ್ತಿದೆ. ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳನ್ನು ಗಣನೆಗೆ ತೆಗೆದುಕೊಂಡಲ್ಲಿ ಇದು ಎರಡು ಪಟ್ಟು ಹೆಚ್ಚಾಗುತ್ತದೆ. ಮೀನು, ಪ್ರಾಣಿಜನ್ಯ ಪ್ರೊಟೀನ್ ಪೈಕಿ ಅಗ್ಗದ ದರದಲ್ಲಿ ಕೈಗೆಟುಕುವ ಮತ್ತು ಸಮೃದ್ಧ ಆಹಾರದ ಮೂಲವಾಗಿದೆ. ಹಾಗಾಗಿ ಹಸಿವು ಮತ್ತು ಪೋಷಕಾಂಶಗಳ ಕೊರತೆಯನ್ನು ತಗ್ಗಿಸುವ ಆರೋಗ್ಯಕರ ಆಯ್ಕೆಗಳಲ್ಲಿ ಒಂದಾಗಿದೆ. ಮೀನುಗಾರಿಕೆ ವಲಯವು ಮೀನುಗಾರರ, ಮೀನು ಕೃಷಿಕರ, ಮೀನು ಮಾರಾಟಗಾರರ ಮತ್ತು ಮೀನುಗಾರಿಕೆ ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿರುವ ಇತರ ಪಾಲುದಾರರ ಆರ್ಥಿಕ ಸಮೃದ್ಧಿ ವರ್ಧನೆ ಸಾಧಿಸುವ ಅಪಾರ ಸಾಮರ್ಥ್ಯವನ್ನು ಹೊಂದಿದೆ.

1.2 ಭಾರತ ಸರ್ಕಾರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಭಾರತದಲ್ಲಿ ಮೀನುಗಾರಿಕೆ ಕ್ಷೇತ್ರದ ಸುಸ್ಥಿರ ಮತ್ತು ಜವಾಬ್ದಾರಿಯುತ ಅಭಿವೃದ್ಧಿಯ ಮೂಲಕ ನೀಲಿ ಕ್ರಾಂತಿಯನ್ನು ತರುವ ಯೋಜನೆಯನ್ನು ಒಟ್ಟು ರೂ. 20,050 ಕೋಟಿ ಹೂಡಿಕೆಯಲ್ಲಿ ಮೀನುಗಾರರ ಕಲ್ಯಾಣ ಸೇರಿದಂತೆ ಮೀನುಗಾರಿಕೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಪಿ.ಎಂ.ಎಂ.ಎಸ್.ಯೋಜನೆಯನ್ನು ಎಲ್ಲಾ ರಾಜ್ಯಗಳಲ್ಲಿ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ 2020 – 21 ಆರ್ಥಿಕ ವರ್ಷದಿಂದ ಜಾರಿಗೆ ಬಂದಿದ್ದು ಇದು 2024 – 25 ರವರೆಗೆ 5 (ಐದು) ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.

1.3 ಪಿ.ಎಂ.ಎಂ.ಎಸ್. ಯೋಜನೆಯಡಿ ಮೀನು ಕೃಷಿಕರು, ಮೀನುಗಾರರು, ಮೀನು ಕಾರ್ಮಿಕರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳೆಯರು / ವಿಕಲ ಚೇತನರು / ಮೀನುಗಾರಿಕೆ ಕ್ಷೇತ್ರದಲ್ಲಿನ ಸ್ವಸಹಾಯ ಗುಂಪುಗಳು (SHGs) / ಜಂಟಿ ಹೊಣೆಗಾರಿಕೆ ಗುಂಪುಗಳು (JLGs) / ಮೀನುಗಾರಿಕೆ ಸಹಕಾರ ಸಂಘಗಳು / ಮೀನುಗಾರಿಕೆ ಒಕ್ಕೂಟಗಳು / ಉದ್ಯಮಿಗಳು ಮತ್ತು ಖಾಸಗಿ ಸಂಸ್ಥೆಗಳು ಮತ್ತು ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳು / ಕಂಪನಿಗಳಿಗೆ (FFPOs / Cs) ಮೀನುಗಾರಿಕೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಈ ಯೋಜನೆ ಅಡಿಯಲ್ಲಿ ಆರ್ಥಿಕ ನೆರವು ಒದಗಿಸಲಾಗುತ್ತದೆ.

1.4 ಪಿ.ಎಂ.ಎಂ.ಎಸ್. ಯೋಜನೆಯಡಿ ಫಲಾನುಭವಿ ಆಧಾರಿತ ಚಟುವಟಿಕೆಗಳನ್ನು ಕೈಗೊಳ್ಳಲು ಒಟ್ಟು ರೂ 12340 ಕೋಟಿ ಹೂಡಿಕೆ ಮಾಡಲು ಉದ್ದೇಶಿಸಲಾಗಿದೆ.

1.5 ಪಿ.ಎಂ.ಎಂ.ಎಸ್.ವೈ ಅಡಿಯಲ್ಲಿ ಪ್ರೋತ್ಸಾಹಿಸಲ್ಪಡುವ ಫಲಾನುಭವಿ ಆಧಾರಿತ ಚಟುವಟಿಕೆಗಳು ಯಾವುವೆಂದರೆ ಹ್ಯಾಚರಿ ಕೇಂದ್ರಗಳ ಅಭಿವೃದ್ಧಿ, ಮೀನು ಕೊಳಗಳ ಹಾಗೂ ಮೀನುಮರಿ ಪಾಲನೆ ಕೊಳಗಳ ನಿರ್ಮಾಣ, ಮೀನು ಕೃಷಿ ಚಟುವಟಿಕೆಗಳಿಗೆ ಹೂಡಿಕೆ ವೆಚ್ಚ, ಪುನರಾವರ್ತಿತ ಜಲಕೃಷಿ ವ್ಯವಸ್ಥೆ (ಆರ್.ಎ.ಎಸ್), ಜಲಾಶಯಗಳಲ್ಲಿ

ಮತ್ತು ಸಮುದ್ರದಲ್ಲಿ ಪಂಜರದ ಮೀನು ಕೃಷಿ, ಕಡಲಕಳೆ ಕೃಷಿ, ಮೃದ್ವಂಗಿಗಳ ಕೃಷಿ, ಟ್ರೌಟ್ ಕೃಷಿಗಾಗಿ 'ರೇಸ್-ವೇ' ಗಳ ನಿರ್ಮಾಣ, ಅಲಂಕಾರಿಕ ಮತ್ತು ಮನರಂಜನಾ ಮೀನುಗಾರಿಕೆ, ಆಳ ಸಮುದ್ರದ ಮೀನುಗಾರಿಕಾ ದೋಣಿಗಳ ಸ್ವಾದೀನಕ್ಕೆ ಬೆಂಬಲ, ಹಾಲಿ ಕಾರ್ಯನಿರ್ವಹಿಸುತ್ತಿರುವ ಮೀನುಗಾರಿಕಾ ದೋಣಿಗಳ ಉನ್ನತೀಕರಣ, ಸಾಂಪ್ರದಾಯಿಕ ಮತ್ತು ಯಾಂತ್ರಿಕೃತ ಮೀನುಗಾರಿಕಾ ದೋಣಿಗಳ ಮೀನುಗಾರರಿಗೆ ಸುರಕ್ಷತಾ ಕಿಟ್‌ಗಳ ಪೂರೈಕೆ, ಸಾಂಪ್ರದಾಯಿಕ ಮೀನುಗಾರರಿಗೆ ದೋಣಿ ಮತ್ತು ಬಲೆಗಳನ್ನು ಒದಗಿಸುವುದು, ಸಾಂಪ್ರದಾಯಿಕ ಮೀನುಗಾರರಿಗೆ ಸಂವಹನ / ಟ್ರ್ಯಾಕಿಂಗ್ ಮತ್ತು ಸಂಭಾವ್ಯ ಮೀನುಗಾರಿಕೆ ವಲಯಗಳನ್ನು ಗುರುತಿಸಲು ಅವಶ್ಯವಿರುವ ಸಾಧನಗಳನ್ನು ಖರೀದಿಸಲು ಸಹಾಯ, ಶೀಥಲೀಕರಣ ಮತ್ತು ಮಂಜುಗಡ್ಡೆ ಕಾರ್ಖಾನೆಗಳ ನಿರ್ಮಾಣಕ್ಕೆ ಸಹಾಯ, ಮೀನಿನ ಪುಡಿ ಮತ್ತು ಮೀನಿನ ಎಣ್ಣೆ ತೆಗೆಯುವ ಗಿರಣಿಗಳ ನಿರ್ಮಾಣಕ್ಕೆ ಸಹಾಯ, ಮೀನು ಚಿಲ್ಲರೆ ಮಾರುಕಟ್ಟೆಗಳು ಮತ್ತು ಕಿಯೋಸ್ಕ್‌ಗಳ ನಿರ್ಮಾಣ, ಮೀನು ಮೌಲ್ಯವರ್ಧನಾ ಉದ್ಯಮ ಘಟಕಗಳ ನಿರ್ಮಾಣ, ಇ-ಟ್ರೇಡಿಂಗ್ ಮತ್ತು ಇ-ಮಾರ್ಕೆಟಿಂಗ್ ವೇದಿಕೆಗಳ ನಿರ್ಮಾಣ, ರೋಗ ಪತ್ತೆ ಮತ್ತು ಗುಣಮಟ್ಟದ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆಗೆ ಸಹಾಯ, ಮೀನುಗಾರರು ಮತ್ತು ಮೀನುಗಾರಿಕಾ ದೋಣಿಗಳಿಗೆ ವಿಮೆ, ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಸಕ್ರಿಯ ಸಾಂಪ್ರದಾಯಿಕ ಮೀನುಗಾರರಿಗೆ ಜೀವನೋಪಾಯ ಮತ್ತು ಪೌಷ್ಠಿಕಾಂಶದ ಭದ್ರತೆ ಒದಗಿಸುವುದು ಇತ್ಯಾದಿ.

1.6 ಮೀನುಗಾರಿಕೆ ಇಲಾಖೆ, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ಜೂನ್ 24, 2020 ರಂದು ಪಿ.ಎಂ.ಎಂ.ಎಸ್ ಯೋಜನೆಯ ಸವಿವರವಾದ ಕಾರ್ಯಾಚರಣಾ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಅದರ ಪ್ರತಿಯನ್ನು ಇಲಾಖೆಯ ಮತ್ತು ಎನ್.ಎಫ್.ಡಿ.ಬಿ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗಿದೆ. i) www.dof.gov.in ಮತ್ತು ii) www.nfdb.gov.in ರಲ್ಲಿ ಅಪ್ಲೋಡ್ ಮಾಡಲಾಗಿದೆ



## 2. ಪಿ.ಎಂ.ಎಂ.ಎಸ್ ಯೋಜನೆಯ ರಚನೆ ಮತ್ತು ಘಟಕಗಳು

2.1 ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯು ಎರಡು ಪ್ರತ್ಯೇಕ ಯೋಜನೆಗಳನ್ನು ಹೊಂದಿರುವ ಸಮ್ಮಿಲಿತ ಯೋಜನೆಯಾಗಿದೆ. ಅವು ಯಾವುವೆಂದರೆ

(ಎ) ಕೇಂದ್ರ ವಲಯ ಯೋಜನೆ (Central Sector)


(ಬಿ) ಕೇಂದ್ರ ಪುರಸ್ಕೃತ ಯೋಜನೆ (Centrally Sponsored Scheme)

2.2 ಕೇಂದ್ರ ಪುರಸ್ಕೃತ ಯೋಜನೆಯ ಘಟಕವನ್ನು ಈ ಕೆಳಗಿನ ಮೂರು ವಿಶಾಲ ಶೀರ್ಷಿಕೆಗಳ ಅಡಿಯಲ್ಲಿ ಫಲಾನುಭವಿ ಆಧಾರಿತ ಮತ್ತು ಫಲಾನುಭವಿಯೇತರ ಘಟಕಗಳಾಗಿ / ಚಟುವಟಿಕೆಗಳಾಗಿ ವಿಂಗಡಿಸಲಾಗಿದೆ:

i) ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು

ii) ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ನಿರ್ವಹಣೆ

iii) ಮೀನುಗಾರಿಕೆ ನಿರ್ವಹಣೆ ಮತ್ತು ನಿಯಂತ್ರಣದ ಚೌಕಟ್ಟು






## 3. ಪಿ.ಎಂ.ಎಂ.ಎಸ್ ಯೋಜನೆಯ ಗುರಿಗಳು ಮತ್ತು ಉದ್ದೇಶಗಳು

**3.1 ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ (PMMSY)ಯ ಗುರಿ ಮತ್ತು ಉದ್ದೇಶಗಳು ಈ ಕೆಳಗಿನಂತಿರುತ್ತವೆ:**

ಎ) ಮೀನುಗಾರಿಕಾ ಸಾಮರ್ಥ್ಯವನ್ನು ಸುಸ್ಥಿರ, ಜವಾಬ್ದಾರಿಯುತ ಮತ್ತು ನ್ಯಾಯ ಸಮ್ಮತ ರೀತಿಯಲ್ಲಿ ಹೆಚ್ಚಿಸುವುದು.

ಬಿ) ನೆಲ ಮತ್ತು ಜಲದ ಸಮಗ್ರ ಬಳಕೆಯ ಮೂಲಕ ಮೀನು ಉತ್ಪಾದನೆ ಮತ್ತು ಉತ್ಪಾದಕತೆಯನ್ನು ವಿಸ್ತರಣೆ, ತೀವ್ರತೆ ಮತ್ತು ವಿವಿಧತೆಯ ಮೂಲಕ ಹೆಚ್ಚಿಸುವುದು.


ಸಿ) ಮೀನು ಮಾರಾಟದ ಮೌಲ್ಯ ಸರಪಳಿಯನ್ನು ಆಧುನೀಕರಿಸುವುದು ಮತ್ತು ಬಲಪಡಿಸುವುದು – ಹಿಡುವಳಿ ನಂತರದ ನಿರ್ವಹಣೆ ಮತ್ತು ಗುಣಮಟ್ಟದ ಸುಧಾರಣೆ.

ಡಿ) ಮೀನುಗಾರರ ಮತ್ತು ಮೀನು ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುವುದು ಹಾಗೂ ಮೀನುಗಾರಿಕೆಯಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಜಿಸುವುದು.

ಇ) ಕೃಷಿ ಜಿ.ಡಿ.ಪಿ ಮತ್ತು ರಫ್ತಿಗೆ ಮೀನುಗಾರಿಕೆ ಕೊಡುಗೆಯನ್ನು ಹೆಚ್ಚಿಸುವುದು.

ಎಫ್) ಮೀನುಗಾರರಿಗೆ ಮತ್ತು ಮೀನು ಕೃಷಿಕರಿಗೆ ಸಾಮಾಜಿಕ, ಭೌತಿಕ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುವುದು.

ಜಿ) ಸದೃಡ ಮೀನುಗಾರಿಕೆ ನಿರ್ವಹಣೆ ಮತ್ತು ನಿಯಂತ್ರಣ ಚೌಕಟ್ಟಿನ ನಿರ್ಮಾಣ.



## 4. ಫಲಾನುಭವಿಗಳು

### 4.1 ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ ಉದ್ದೇಶಿತ ಫಲಾನುಭವಿಗಳು:

I) ಮೀನುಗಾರರು

ii) ಮೀನು ಕೃಷಿಕರು

iii) ಮೀನು ಕಾರ್ಮಿಕರು ಮತ್ತು ಮೀನು ಮಾರಾಟಗಾರರು

iv) ಮೀನುಗಾರಿಕೆ ಅಭಿವೃದ್ಧಿ ನಿಗಮಗಳು

v) ಮೀನುಗಾರಿಕೆ ಕ್ಷೇತ್ರದಲ್ಲಿನ ಸ್ವಸಹಾಯ ಗುಂಪುಗಳು (SHGs) / ಜಂಟಿ ಹೊಣೆಗಾರಿಕೆ ಗುಂಪುಗಳು (JLGs)

vi) ಮೀನುಗಾರಿಕೆ ಸಹಕಾರ ಸಂಸ್ಥೆಗಳು

vii) ಮೀನುಗಾರಿಕೆ ಒಕ್ಕೂಟಗಳು

viii) ಉದ್ಯಮಿಗಳು ಮತ್ತು ಖಾಸಗಿ ಸಂಸ್ಥೆಗಳು

ix) ಮೀನು ಕೃಷಿಕರ ಉತ್ಪಾದಕ ಸಂಸ್ಥೆಗಳು / ಕಂಪನಿಗಳು (FFPOs / Cs)

x) ಪರಿಶಿಷ್ಟ ವರ್ಗ / ಪರಿಶಿಷ್ಟ ಪಂಗಡ / ಮಹಿಳೆಯರು / ವಿಕಲ ಚೇತನ ವ್ಯಕ್ತಿಗಳು

xi) ರಾಜ್ಯ ಸರ್ಕಾರಗಳು / ಕೇಂದ್ರಾಡಳಿತ ಪ್ರದೇಶಗಳು ಮತ್ತು ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟ ಸಾಂಸ್ಥಿಕ ಸಂಸ್ಥೆಗಳು

xii) ರಾಜ್ಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಗಳು (SFDB)

xiii) ಕೇಂದ್ರ ಸರ್ಕಾರ ಮತ್ತು ಅದರ ಸ್ವಾಮ್ಯಕ್ಕೆ ಒಳಪಟ್ಟ ಸಾಂಸ್ಥಿಕ ಸಂಸ್ಥೆಗಳು



## 5 ಆರ್ಥಿಕ ಸಹಾಯದ ಪ್ರಕಾರಗಳು

### 5.1 ಕೇಂದ್ರ ವಲಯ ಯೋಜನೆಗಳು (CS)

ಎ) ಯೋಜನೆಯ ಸಂಪೂರ್ಣ ಘಟಕ ವೆಚ್ಚನ್ನು ಕೇಂದ್ರ ಸರ್ಕಾರವೇ ಭರಿಸಲಿದೆ. (ಶೇ 100 ರಷ್ಟು ಕೇಂದ್ರ ಸರ್ಕಾರದ ಸಹಾಯನುದಾನ)

ಬಿ) ರಾಷ್ಟ್ರೀಯ ಮೀನುಗಾರಿಕಾ ಅಭಿವೃದ್ಧಿ ಮಂಡಳಿ ಸೇರಿದಂತೆ ಕೇಂದ್ರ ಸರ್ಕಾರದ ಸಾಂಸ್ಥಿಕ ಸಂಸ್ಥೆಗಳು ಮತ್ತು ರಾಜ್ಯ ಸರ್ಕಾರಗಳು ಫಲಾನುಭವಿ ಆಧಾರಿತ ವೈಯಕ್ತಿಕ / ಗುಂಪು ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದಾದಲ್ಲಿ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಯೋಜನೆಯ ಘಟಕ ವೆಚ್ಚದ ಶೇಕಡಾ 40 ರಷ್ಟು ಮತ್ತು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಮಹಿಳಾ ಫಲಾನುಭವಿಗಳಿಗೆ ಕೇಂದ್ರದ ನೆರವು ಶೇಕಡಾ 60 ವರೆಗೆ ಇರುತ್ತದೆ.

### 5.2 ಕೇಂದ್ರ ಪುರಸ್ಕೃತ ಯೋಜನೆ (CSS)

5.2.1 ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಫಲಾನುಭವಿಯೇತರ ಉಪ–ಘಟಕಗಳು / ಚಟುವಟಿಕೆಗಳನ್ನು ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಜಾರಿಗೆ ತರಲು, ಸಂಪೂರ್ಣ ಯೋಜನೆ / ಘಟಕ ವೆಚ್ಚವನ್ನು ಈ ಕೆಳಗಿನಂತೆ ಕೇಂದ್ರ ಮತ್ತು ರಾಜ್ಯಗಳ ನಡುವೆ ಹಂಚಿಕೊಳ್ಳಲಾಗುತ್ತದೆ:

ಎ) ಈಶಾನ್ಯ ಮತ್ತು ಹಿಮಾಲಯ ರಾಜ್ಯಗಳು: 90% ಕೇಂದ್ರದ ಪಾಲು ಮತ್ತು 10% ರಾಜ್ಯದ ಪಾಲು.

ಬಿ) ಇತರೆ ರಾಜ್ಯಗಳು: 60% ಕೇಂದ್ರದ ಪಾಲು ಮತ್ತು 40% ರಾಜ್ಯದ ಪಾಲು.

ಸಿ) ಕೇಂದ್ರಾಡಳಿತ ಪ್ರದೇಶಗಳು (ಶಾಸಕಾಂಗದೊಂದಿಗೆ ಮತ್ತು ಶಾಸಕಾಂಗವಿಲ್ಲದೆ): 100% ಕೇಂದ್ರದ ಪಾಲು.

5.2.2 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ಜಾರಿಗೆ ತರಬೇಕಾದ ಫಲಾನುಭವಿ ಆಧಾರಿತ ಅಂದರೆ ವೈಯಕ್ತಿಕ / ಗುಂಪು ಚಟುವಟಿಕೆಗಳ ಉಪ–ಘಟಕಗಳು / ಚಟುವಟಿಕೆಗಳಿಗೆ, ಕೇಂದ್ರ ಮತ್ತು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ಸರ್ಕಾರದ ಹಣಕಾಸಿನ ನೆರವು ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ಯೋಜನೆ / ಘಟಕದ ಶೇ. 40 ರಷ್ಟು ಮತ್ತು ಎಸ್ಸಿ / ಎಸ್ಟಿ / ಮಹಿಳೆಯರಿಗೆ ಯೋಜನೆ / ಘಟಕ ವೆಚ್ಚದ ಶೇ. 60 ಕ್ಕೆ ಸೀಮಿತವಾಗಿರುತ್ತದೆ. ಸರ್ಕಾರದ ಹಣಕಾಸಿನ ನೆರವನ್ನು ಕೇಂದ್ರ ಮತ್ತು ರಾಜ್ಯ / ಕೇಂದ್ರಾಡಳಿತ ಪ್ರದೇಶಗಳ ನಡುವೆ ಈ ಕೆಳಗಿನ ಅನುಪಾತದಂತೆ ಹಂಚಿಕೊಳ್ಳಲಾಗುತ್ತದೆ:

ಎ) ಈಶಾನ್ಯ ಮತ್ತು ಹಿಮಾಲಯ ರಾಜ್ಯಗಳು: 90% ಕೇಂದ್ರದ ಪಾಲು ಮತ್ತು 10% ರಾಜ್ಯದ ಪಾಲು.

ಬಿ) ಇತರೆ ರಾಜ್ಯಗಳು: 60% ಕೇಂದ್ರದ ಪಾಲು ಮತ್ತು 40% ರಾಜ್ಯದ ಪಾಲು.


ಸಿ) ಕೇಂದ್ರಾಡಳಿತ ಪ್ರದೇಶಗಳು (ಶಾಸಕಾಂಗದೊಂದಿಗೆ ಮತ್ತು ಶಾಸಕಾಂಗವಿಲ್ಲದೆ): 100% ಕೇಂದ್ರ ಪಾಲು (ಕೇಂದ್ರಾಡಳಿತ ಪ್ರದೇಶಗಳ ಪಾಲು ಇಲ್ಲ).

5.3. ಉತ್ತಮ ತಿಳುವಳಿಕೆಯ ಉದ್ದೇಶಕ್ಕಾಗಿ, ನಂತರದ ಪ್ಯಾರಾಗಳಲ್ಲಿ ವಿವರಿಸಿರುವಂತೆ ಧನಸಹಾಯದ ಮಾದರಿ ಮತ್ತು ಸರ್ಕಾರದ ಹಣಕಾಸಿನ ಸಹಾಯವನ್ನು ಚಿತ್ರಣ ರೀತಿಯಲ್ಲಿ ವಿವರಿಸಲಾಗಿದೆ.


5.4 ಕೆಳಗಿನ ಚಿತ್ರಣದಲ್ಲಿ ವಿವರಣೆಯ ಉದ್ದೇಶಕ್ಕಾಗಿ, ಯೋಜನೆಯ ವೆಚ್ಚ / ಘಟಕ ವೆಚ್ಚವನ್ನು ರೂ. 10 ಲಕ್ಷ / ಯೂನಿಟ್ ಎಂದು ಪರಿಗಣಿಸಲಾಗಿದೆ.

5.4.1 ಕೇಂದ್ರ ಪುರಸ್ಕೃತ ಯೋಜನೆ (ಸಿಎಸ್ಎಸ್) ಘಟಕ

(ಎ) ಸಿ.ಎಸ್.ಎಸ್ (ಫಲಾನುಭವಿಯೇತರ ಚಟುವಟಿಕೆಗಳು) ಅಡಿಯಲ್ಲಿ ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು ನೇರವಾಗಿ ಜಾರಿಗೆ ತರುವ ಯೋಜನೆಗಳು




(ಬಿ) **ಫಲಾನುಭವಿ ಆಧಾರಿತ ಚಟುವಟಿಕೆಗಳು – ಸಾಮಾನ್ಯ ರಾಜ್ಯಗಳು**



## (ಸಿ) ಫಲಾನುಭವಿ ಆಧಾರಿತ ಚಟುವಟಿಕೆಗಳು – ಈಶಾನ್ಯ ಮತ್ತು ಹಿಮಾಲಯ ರಾಜ್ಯಗಳು

**ಸಾಮಾನ್ಯ ವರ್ಗ**

- ಒಟ್ಟು ಯೋಜನಾ ವೆಚ್ಚ ರೂ.10 ಲಕ್ಷ
  - ಸಹಾಯಧನ ಅರ್ಹತಾ ಮೊತ್ತ 40% ರೂ.4 ಲಕ್ಷ
    - ಶೇ 90 ರಂತೆ ಕೇಂದ್ರದ ಪಾಲು ರೂ.3.6 ಲಕ್ಷ
    - ಶೇ 10 ರಂತೆ ರಾಜ್ಯದ ಪಾಲು ರೂ.0.4 ಲಕ್ಷ
  - ಫಲಾನುಭವಿಯ ಹೂಡಿಕೆ 60% ರೂ.6 ಲಕ್ಷ

**ಪ.ಜಾ/ಪ.ಪಂ/ಮಹಿಳೆ**

- ಒಟ್ಟು ಯೋಜನಾ ವೆಚ್ಚ ರೂ.10 ಲಕ್ಷ
  - ಸಹಾಯಧನ ಅರ್ಹತಾ ಮೊತ್ತ 60% ರೂ.6 ಲಕ್ಷ
    - ಶೇ 90 ರಂತೆ ಕೇಂದ್ರದ ಪಾಲು ರೂ.5.4 ಲಕ್ಷ
    - ಶೇ 10 ರಂತೆ ರಾಜ್ಯದ ಪಾಲು ರೂ.0.6 ಲಕ್ಷ
  - ಫಲಾನುಭವಿಯ ಹೂಡಿಕೆ 40% ರೂ.4 ಲಕ್ಷ

## (ಡಿ) ಫಲಾನುಭವಿ ಆಧಾರಿತ ಚಟುವಟಿಕೆಗಳು – ಕೇಂದ್ರಾಡಳಿತ ಪ್ರದೇಶಗಳು

**ಸಾಮಾನ್ಯ ವರ್ಗ**

- ಒಟ್ಟು ಯೋಜನಾ ವೆಚ್ಚ ರೂ.10 ಲಕ್ಷ
  - ಸಹಾಯಧನ ಅರ್ಹತಾ ಮೊತ್ತ 40% ರೂ.4 ಲಕ್ಷ
    - ಶೇ 100 ರಂತೆ ಕೇಂದ್ರದ ಪಾಲು ರೂ.4.0 ಲಕ್ಷ
    - ಕೇಂದ್ರಾಡಳಿತ ಪ್ರದೇಶದ ಪಾಲು – ಇಲ್ಲ
  - ಫಲಾನುಭವಿಯ ಹೂಡಿಕೆ 60% ರೂ.6 ಲಕ್ಷ


**ಪ.ಜಾ/ಪ.ಪಂ/ಮಹಿಳೆ**

- ಒಟ್ಟು ಯೋಜನಾ ವೆಚ್ಚ ರೂ.10 ಲಕ್ಷ
  - ಸಹಾಯಧನ ಅರ್ಹತಾ ಮೊತ್ತ 60% ರೂ.6 ಲಕ್ಷ
    - ಶೇ 100 ರಂತೆ ಕೇಂದ್ರದ ಪಾಲು ರೂ.6.0 ಲಕ್ಷ
    - ಕೇಂದ್ರಾಡಳಿತ ಪ್ರದೇಶದ ಪಾಲು – ಇಲ್ಲ
  - ಫಲಾನುಭವಿಯ ಹೂಡಿಕೆ 40% ರೂ.4 ಲಕ್ಷ



### 5.4.2 ಕೇಂದ್ರ ವಲಯ ಯೋಜನೆ (ಸಿಎಸ್)

(ಅ) ಕೇಂದ್ರ ವಲಯ ಯೋಜನೆ ಅಡಿಯಲ್ಲಿ ಫಲಾನುಭವಿ ಆಧಾರಿತ ಚಟುವಟಿಕೆಗಳು




## 6. ಚಟುವಟಿಕೆಗಳ ಪಟ್ಟಿ

6.1ಪಿ.ಎಂ.ಎಂ.ಎಸ್.ವೈನ ಕೇಂದ್ರ ವಲಯ ಯೋಜನೆ ಮತ್ತು ಕೇಂದ್ರ ಪುರಸ್ಕೃತ ಯೋಜನೆಯ ಉಪ–ಘಟಕಗಳು / ಚಟುವಟಿಕೆಗಳ ವಿವರಗಳನ್ನು ಹಾಗೂ ಬೆಂಬಲಿಸಲಾಗುವ ಕಾರ್ಯಕ್ರಮಗಳ ವಿವರಗಳನ್ನು ಕಾರ್ಯಾಚರಣಾ ಮಾರ್ಗಸೂಚಿಗಳಲ್ಲಿ ನೀಡಲಾಗಿದೆ.

6.2 ಪಿ.ಎಂ.ಎಂ.ಎಸ್.ವೈ ನ ಕೇಂದ್ರ ಪುರಸ್ಕೃತ ಯೋಜನೆ ಅಡಿಯಲ್ಲಿ ಫಲಾನುಭವಿ ಆಧಾರಿತ ಉಪ–ಘಟಕಗಳು ಮತ್ತು ಚಟುವಟಿಕೆಗಳ ವಿವರಗಳು ಮತ್ತು ಚಟುವಟಿಕೆಗಳಾಧಾರಿತ ಘಟಕ ವೆಚ್ಚಗಳು, ಸರ್ಕಾರದ ನೆರವಿನ ವಿವರಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ:



# ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯ ಕೇಂದ್ರ ಪುರಸ್ಕೃತ ಘಟಕಗಳ ಅಡಿಯಲ್ಲಿ ಫಲಾನುಭವಿ ಆಧಾರಿತ ಯೋಜನೆಗಳು

| ಕ್ರ.ಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| ಅ) | **ಉತ್ಪಾದನೆ ಮತ್ತು ಉತ್ಪಾದಕತೆಯ ವರ್ಧನೆಗೆ ಸಂಬಂಧಿಸಿದ ಯೋಜನೆಗಳು** | | | | |
| | **ಒಳನಾಡು ಮೀನುಗಾರಿಕೆ ಮತ್ತು ಜಲಕೃಷಿ ಅಭಿವೃದ್ಧಿ** | | | | |
| 1 | ಸಿಹಿನೀರಿನ ಮೀನುಗಳ ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 25.00 | 10.00 | 15.00 |
| 2 | ಹೊಸ ಸಿಹಿನೀರಿನ ಸ್ಕ್ಯಾಂಪಿ ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 50.00 | 20.00 | 30.00 |
| 3 | ಹೊಸ ಪಾಲನೆ ಕೊಳಗಳ ನಿರ್ಮಾಣ (ನರ್ಸರಿ / ಮೀನುಮರಿ ಪಾಲನೆ ಕೊಳಗಳು) | (ಹೆ) | 7.00 | 2.80 | 4.20 |
| 4 | ಹೊಸ ಮೀನುಕೃಷಿ ಕೊಳಗಳ ನಿರ್ಮಾಣ | (ಹೆ) | 7.00 | 2.80 | 4.20 |
| 5 | ಸಮಗ್ರ ಮೀನು ಕೃಷಿ, ಸ್ಕ್ಯಾಂಪಿ, ಪಂಗಾಸಿಯಸ್, ತಿಲಾಪಿಯಾ ಸೇರಿದಂತೆ ಸಿಹಿ ನೀರಿನ ಜಲಕೃಷಿಗೆ ಹೂಡಿಕೆ ವೆಚ್ಚಗಳು | (ಹೆ) | 4.00 | 1.60 | 2.40 |
| 6 | ಅಗತ್ಯಕ್ಕೆ ಅನುಗುಣವಾಗಿ ಹೊಸ ಹಿನ್ನೀರು ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 50.00 | 20.00 | 30.00 |
| 7 | ಹಿನ್ನೀರು ಪ್ರದೇಶಗಳಲ್ಲಿ ಜಲಚರ ಸಾಕಣೆಗಾಗಿ ಹೊಸ ಕೊಳಗಳ ನಿರ್ಮಾಣ | (ಹೆ) | 8.00 | 3.20 | 4.80 |
| 8 | ಲವಣ / ಕ್ಷಾರೀಯ ಪ್ರದೇಶಗಳಿಗೆ ಹೊಸ ಕೊಳಗಳ ನಿರ್ಮಾಣ | (ಹೆ) | 8.00 | 3.20 | 4.80 |



| ಕ್ರ.ಸಂ. | ಉಪ–ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| 9 | ಹಿನ್ನೀರು ಪ್ರದೇಶಗಳಲ್ಲಿ ಜಲಚರ ಸಾಕಣೆಗಾಗಿ ಹೂಡಿಕೆ ವೆಚ್ಚ | (ಹೆ) | 6.00 | 2.40 | 3.60 |
| 10 | ಲವಣ / ಕ್ಷಾರೀಯ ಪ್ರದೇಶಗಳಲ್ಲಿ ಮೀನು ಕೃಷಿಗೆ ಹೂಡಿಕೆ ವೆಚ್ಚ | (ಹೆ) | 6.00 | 2.40 | 3.60 |
| 11 | ಘಟಕವೆಚ್ಚದಲ್ಲಿ ರೂ 8 ಲಕ್ಷ ಹೂಡಿಕೆ ವೆಚ್ಚ ಸೇರಿದಂತೆ ಹಿನ್ನೀರು / ಲವಣ / ಕ್ಷಾರೀಯ ಪ್ರದೇಶಗಳಲ್ಲಿ ಬಯೋಫ್ಲೋಕ್ ಕೊಳಗಳ ನಿರ್ಮಾಣ | (ಹೆ) | 18.00 | 7.20 | 10.80 |
| 12 | ಸಿಹಿನೀರಿನ ಪ್ರದೇಶಗಳಿಗೆ ಬಯೋಫ್ಲೋಕ್ ಕೊಳಗಳ ನಿರ್ಮಾಣ, (ಹೆಕ್ಟೇರಿಗೆ 4 ಲಕ್ಷ ರೂ ಹೂಡಿಕೆ ವೆಚ್ಚ ಸೇರಿದಂತೆ) | (ಹೆ) | 14.00 | 5.60 | 8.40 |
| 13 | ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ದಾಸ್ತಾನು @ 1000 ಬಲಿತ ಬಿತ್ತನೆ ಮರಿ / (ಹೆ) (ರೂ 3.0 ಲಕ್ಷ / ಒಂದು ಲಕ್ಷ ಬಿತ್ತನೆ ಮರಿ) | ಒಂದು ಲಕ್ಷ ಬಿತ್ತನೆ ಮರಿ | 3.00 | 1.20 | 1.80 |
| 14 | ಜಲಾವೃತ (ವೆಟ್‌ಲ್ಯಾಂಡ್) ಪ್ರದೇಶಗಳಲ್ಲಿ ಬಲಿತ ಮೀನು ಮರಿಗಳ ದಾಸ್ತಾನು @ 1000 ಬಲಿತ ಬಿತ್ತನೆ ಮರಿ / (ಹೆ) (ರೂ 3.0 ಲಕ್ಷ / ಒಂದು ಲಕ್ಷ ಬಿತ್ತನೆ ಮರಿ) | ಒಂದು ಲಕ್ಷ ಬಿತ್ತನೆ ಮರಿ | 3.00 | 1.20 | 1.80 |
| | **ಕಡಲ ಕೃಷಿ ಮತ್ತು ಕಡಲಕಳೆ ಕೃಷಿ ಸೇರಿದಂತೆ ಸಮುದ್ರ ಮೀನುಗಾರಿಕೆಯ ಅಭಿವೃದ್ಧಿ** | | | | |
| 15 | ಕಡಲ ಮೀನುಗಳ ಸಣ್ಣ ಹ್ಯಾಚರಿ ಕೇಂದ್ರಗಳ ಸ್ಥಾಪನೆ | (ಸಂಖ್ಯೆ) | 50.00 | 20.00 | 30.00 |
| 16 | ಕಡಲ ಮೀನುಗಳ ದೊಡ್ಡ ಹ್ಯಾಚರಿ ಕೇಂದ್ರಗಳ ನಿರ್ಮಾಣ | (ಸಂಖ್ಯೆ) | 250.00 | 100.00 | 150.00 |
| 17 | ಕಡಲ ಮೀನು ನರ್ಸರಿಗಳು | (ಸಂಖ್ಯೆ) | 15.00 | 6.00 | 9.00 |
| 18 | ತೆರೆದ ಸಮುದ್ರ ಪಂಜರಗಳ ಸ್ಥಾಪನೆ (100–120 ಘನ ಮೀಟರ್ ಪರಿಮಾಣ) | (ಸಂಖ್ಯೆ) | 5.00 | 2.00 | 3.00 |
| 19 | ಹೂಡಿಕೆ ವೆಚ್ಚ (ಪ್ರತಿ ರಾಫ್ಟ್‌ಗೆ) ಸೇರಿದಂತೆ ಕಡಲಕಳೆ ಕೃಷಿಗೆ ರಾಫ್ಟ್‌ಗಳ ಸ್ಥಾಪನೆ. | (ಸಂಖ್ಯೆ) | 0.015 | 0.006 | 0.009 |

| ಕ್ರ.ಸಂ. | ಉಪ–ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| 20 | ಹೂಡಿಕೆ ವೆಚ್ಚ ಒಳಗೊಂಡಂತೆ ಮೊನೊಲಿನ್ / ಟ್ಯೂಬೆನೆಟ್ ವಿಧಾನದೊಂದಿಗೆ ಕಡಲಕಳೆ ಕೃಷಿ ಸ್ಥಾಪನೆ (ಒಂದು ಘಟಕವು 25 ಮೀ ಉದ್ದದ 15 ಹಗ್ಗಗಳಿಗೆ ಸರಿಸುಮಾರು ಸಮಾನವಾಗಿರುತ್ತದೆ) | (ಸಂಖ್ಯೆ) | 0.080 | 0.030 | 0.050 |
| 21 | ಕಡಲಚಿಪ್ಪು ಕೃಷಿ (ಮಸ್ಸೆಲ್ಸ್, ಕ್ಲಾಮ್ಸ್, ಮುತ್ತು ಇತ್ಯಾದಿ) | (ಸಂಖ್ಯೆ) | 0.200 | 0.080 | 0.120 |
| | **ಈಶಾನ್ಯ ಮತ್ತು ಹಿಮಾಲಯನ್ ರಾಜ್ಯಗಳು / ಕೇಂದ್ರಾಡಳಿತಗಳಲ್ಲಿ ಮೀನುಗಾರಿಕೆಯ ಅಭಿವೃದ್ಧಿ** (ಕೆಳಗಿನ ಚಟುವಟಿಕೆಗಳಲ್ಲದೆ, ಈಶಾನ್ಯ ಮತ್ತು ಹಿಮಾಲಯನ್ ರಾಜ್ಯಗಳು / ಯುಟಿಗಳು ಎಲ್ಲಾ ರಾಜ್ಯಗಳು / ಯುಟಿಗಳಿಗೆ ಸಾಮಾನ್ಯವಾದ ಪಿಎಂಎಂಎಸ್ವೈ ಅಡಿಯಲ್ಲಿ ಇತರ ಉಪ–ಘಟಕಗಳು / ಚಟುವಟಿಕೆಗಳ ಅಡಿಯಲ್ಲಿ ಸಹಕರಿಸಲ್ಪಡುತ್ತವೆ) . | | | | |
| 22 | ಟ್ರೌಟ್ ಮೀನು ಹ್ಯಾಚರಿ ಕೇಂದ್ರಗಳ ಸ್ಥಾಪನೆ. | (ಸಂಖ್ಯೆ) | 50.00 | 20.00 | 30.00 |
| 23 | ರೇಸ್ ವೇಗಳ ನಿರ್ಮಾಣ ಕನಿಷ್ಠ 50 ಕಂ | (ಸಂಖ್ಯೆ) | 3.00 | 1.20 | 1.80 |
| 24 | ಟ್ರೌಟ್ ಪಾಲನೆ ಘಟಕಗಳಿಗೆ ಹೂಡಿಕೆ | (ಸಂಖ್ಯೆ) | 2.50 | 1.00 | 1.50 |
| 25 | ಹೊಸ ಕೊಳಗಳ ನಿರ್ಮಾಣ. | (ಹೆ) | 8.40 | 3.36 | 5.04 |
| 26 | ಶೀತಜಲ ಮೀನುಗಾರಿಕೆಗಾಗಿ ಮಿನಿ ಆರ್.ಎ.ಎಸ್. (RAS) ಸ್ಥಾಪನೆ. (ಕನಿಷ್ಠ 50 ಮೀ 3 / ಟ್ಯಾಂಕ್ ಸಾಮರ್ಥ್ಯದ 4 ಟ್ಯಾಂಕ್ ಮತ್ತು 4 ಟನ್ / ಬೆಳೆ ಮೀನು ಉತ್ಪಾದನಾ ಸಾಮರ್ಥ್ಯದೊಂದಿಗೆ) | (ಸಂಖ್ಯೆ) | 20.00 | 8.00 | 12.00 |
| 27 | ಶೀತಜಲ ಮೀನುಗಾರಿಕೆಗಾಗಿ ಮಧ್ಯಮ ಆರ್ಎಎಸ್ ಸ್ಥಾಪನೆ (ಕನಿಷ್ಠ 50 ಮೀ 3 / ಟ್ಯಾಂಕ್ ಸಾಮರ್ಥ್ಯದ 10 ಟ್ಯಾಂಕ್‌ಗಳು ಮತ್ತು ಮೀನು ಉತ್ಪಾದನಾ ಸಾಮರ್ಥ್ಯ 10 ಟನ್ / ಬೆಳೆ) | (ಸಂಖ್ಯೆ) | 50.00 | 20.00 | 30.00 |
| 28 | ಸಮಗ್ರ ಮೀನು ಸಾಕಣೆ ಮತ್ತು ಹೂಡಿಕೆಗೆ ಬೆಂಬಲ (ಭತ್ತ ಹಾಗೂ ಮೀನು ಕೃಷಿ, ಜಾನುವಾರು ಹಾಗೂ ಮೀನು ಕೃಷಿ ಇತ್ಯಾದಿ). | (ಹೆ) | 1.00 | 0.40 | 0.60 |
| 29 | ಶೀತಜಲ ಪ್ರದೇಶಗಳಲ್ಲಿ ಪಂಜರಗಳ ಸ್ಥಾಪನೆ. | (ಸಂಖ್ಯೆ) | 5.00 | 2.00 | 3.00 |


| ಕ್ರ.ಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| | **ಅಲಂಕಾರಿಕ ಮತ್ತು ಮನರಂಜನಾ ಮೀನುಗಾರಿಕೆಯ ಅಭಿವೃದ್ಧಿ** | | | | |
| 30 | ಹಿತ್ತಲಿನ ಅಲಂಕಾರಿಕ ಮೀನು ಸಾಕಾಣಿಕೆ ಘಟಕ (ಸಾಗರ ಮತ್ತು ಶುದ್ಧ ನೀರು ಎರಡೂ) | (ಸಂಖ್ಯೆ) | 3.00 | 1.20 | 1.80 |
| 31 | ಮಧ್ಯಮ ಪ್ರಮಾಣದ ಅಲಂಕಾರಿಕ ಮೀನು ಸಾಕಾಣಿಕೆ ಘಟಕ (ಸಾಗರ ಮತ್ತು ಸಿಹಿನೀರಿನ ಮೀನು) | (ಸಂಖ್ಯೆ) | 8.00 | 3.20 | 4.80 |
| 32 | ಸಮಗ್ರ ಅಲಂಕಾರಿಕ ಮೀನು ಘಟಕ (ಶುದ್ಧ ನೀರಿನ ಮೀನುಗಳಿಗೆ ಸಂತಾನೋತ್ಪತ್ತಿ ಮತ್ತು ಪಾಲನೆ) | (ಸಂಖ್ಯೆ) | 25.00 | 10.00 | 15.00 |
| 33 | ಸಮಗ್ರ ಅಲಂಕಾರಿಕ ಮೀನು ಘಟಕ (ಸಮುದ್ರ ಮೀನುಗಳ ಸಂತಾನೋತ್ಪತ್ತಿ ಮತ್ತು ಪಾಲನೆ) | (ಸಂಖ್ಯೆ) | 30.00 | 12.00 | 18.00 |
| 34 | ಸಿಹಿನೀರಿನ ಅಲಂಕಾರಿಕ ತಾಯಿಮೀನು ಬ್ಯಾಂಕ್ ಸ್ಥಾಪನೆ. | (ಸಂಖ್ಯೆ) | 100.00 | 40.00 | 60.00 |
| 35 | ಕ್ರೀಡಾ ಮೀನುಗಾರಿಕೆಯ ಪ್ರಚಾರ. | (ಸಂಖ್ಯೆ) | 50.00 | 20.00 | 30.00 |
| | **ತಂತ್ರಜ್ಞಾನದ ಅಳವಡಿಕೆ** | | | | |
| 36 | ದೊಡ್ಡ ಆರ್‌ಎಎಸ್ ಘಟಕ ಸ್ಥಾಪನೆ (ಕನಿಷ್ಠ 90 ಮೀ 3 / ಟ್ಯಾಂಕ್ ಸಾಮರ್ಥ್ಯದ 8 ಟ್ಯಾಂಕ್‌ಗಳು 40 ಟನ್ / ಬೆಳೆ) / ಬಯೋಫ್ಲೋಕ್ (4 ಮೀ ವ್ಯಾಸ 50 ಟ್ಯಾಂಕ್‌ಗಳು ಮತ್ತು 1.5 ಎತ್ತರದ) ಕೃಷಿ ವ್ಯವಸ್ಥೆ. | (ಸಂಖ್ಯೆ). | 50.00 | 20.00 | 30.00 |
| 37 | ಮಧ್ಯಮ ಆರ್‌ಎಎಸ್ ಘಟಕ ಸ್ಥಾಪನೆ (ಕನಿಷ್ಠ 30 ಮೀ 3 / ಟ್ಯಾಂಕ್ ಸಾಮರ್ಥ್ಯದ 10 ಟ್ಯಾಂಕ್ / ಬೆಳೆ 6 ಟ್ಯಾಂಕ್‌ನೊಂದಿಗೆ) / ಬಯೋಫ್ಲೋಕ್ ಕೃಷಿ ವ್ಯವಸ್ಥೆ (4 ಮೀ ವ್ಯಾಸ ಮತ್ತು 1. ಮೀ ಎತ್ತರದ 25 ಟ್ಯಾಂಕ್‌ಗಳು) | (ಸಂಖ್ಯೆ) | 25.00 | 10.00 | 15.00 |
| 38 | ಸಣ್ಣ ಆರ್‌ಎಎಸ್ ಘಟಕ (100 ಮೀ 3 ಸಾಮರ್ಥ್ಯದ 1 ಟ್ಯಾಂಕ್ / ಬಯೋಫ್ಲೋಕ್ (4 ಮೀ ವ್ಯಾಸ ಮತ್ತು 1.5 ಎತ್ತರದ 7 ಟ್ಯಾಂಕ್‌ಗಳು) ಕೃಷಿ ವ್ಯವಸ್ಥೆಯನ್ನು ಸ್ಥಾಪಿಸುವುದು | (ಸಂಖ್ಯೆ) | 7.50 | 3.00 | 4.50 |
| 39 | ಬ್ಯಾಕ್ಯಾರ್ಡ್ ಮಿನಿ ಆರ್‌ಎಎಸ್ ಘಟಕಗಳ ಸ್ಥಾಪನೆ | (ಸಂಖ್ಯೆ). | 0.50 | 0.20 | 0.30 |
| 40 | ಜಲಾಶಯಗಳಲ್ಲಿ ಪಂಜರಗಳ ಸ್ಥಾಪನೆ | (ಸಂಖ್ಯೆ). | 3.00 | 1.20 | 1.80 |
| 41 | ತೆರೆದ ಜಲಮೂಲಗಳಲ್ಲಿ ಪೆನ್ ನಿರ್ಮಿಸಿ ಮೀನುಕೃಷಿ | (ಹೆ). | 3.00 | 1.20 | 1.80 |

| ಕ್ರ.ಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| ಬಿ | **ಮೂಲಭೂತ ಸೌಕರ್ಯ ಮತ್ತು ಹಿಡುವಳಿ ನಂತರದ ಚಟುವಟಿಕೆಗಳು** | | | | |
| | **ಹಿಡುವಳಿ ನಂತರದ ಮತ್ತು ಶೀತಲ ಸರಪಳಿ ಮೂಲಸೌಕರ್ಯ** | | | | |
| 42 | ಶೈತ್ಯಾಗಾರ / ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ | | | | |
| (ಎ) | ಕನಿಷ್ಠ 10 ಟನ್ ಸಂಗ್ರಹ ಸಾಮರ್ಥ್ಯದ ಸ್ಥಾವರ | (ಸಂಖ್ಯೆ) | 40.00 | 16.00 | 24.00 |
| (ಬಿ) | ಕನಿಷ್ಠ 20 ಟನ್ ಸಂಗ್ರಹ ಸಾಮರ್ಥ್ಯದ ಸ್ಥಾವರ | (ಸಂಖ್ಯೆ) | 80.00 | 32.00 | 48.00 |
| (ಸಿ) | ಕನಿಷ್ಠ 30 ಟನ್ ಸಂಗ್ರಹ ಸಾಮರ್ಥ್ಯದ ಸ್ಥಾವರ | (ಸಂಖ್ಯೆ) | 120.00 | 48.00 | 72.00 |
| (ಡಿ) | ಕನಿಷ್ಠ 50 ಟನ್ ಸಂಗ್ರಹ ಸಾಮರ್ಥ್ಯದ ಸ್ಥಾವರ | (ಸಂಖ್ಯೆ) | 150.00 | 60.00 | 90.00 |
| 43 | ಶೈತ್ಯಾಗಾರ / ಮಂಜುಗಡ್ಡೆ ಸ್ಥಾವರಗಳ ಆಧುನೀಕರಣ | (ಸಂಖ್ಯೆ) | 50.00 | 20.00 | 30.00 |
| 44 | ಶೈತ್ಯೀಕರಿಸಿದ ವಾಹನಗಳು | (ಸಂಖ್ಯೆ) | 25.00 | 10.00 | 15.00 |
| 45 | ಶಾಖ ನಿರೋಧಕ ವಾಹನಗಳು | (ಸಂಖ್ಯೆ) | 20.00 | 8.00 | 12.00 |
| 46 | ಐಸ್ ಬಾಕ್ಸೊಂದಿಗೆ ಮೋಟಾರ್ ಸೈಕಲ್ | (ಸಂಖ್ಯೆ) | 0.75 | 0.30 | 0.45 |
| 47 | ಐಸ್ ಪೆಟ್ಟಿಗೆಗಳೊಂದಿಗೆ ಸೈಕಲ್ | (ಸಂಖ್ಯೆ) | 0.10 | 0.04 | 0.06 |
| 48 | ಮೀನು ಮಾರಾಟಕ್ಕಾಗಿ ಇ-ರಿಕ್ಷಾಗಳನ್ನು ಒಳಗೊಂಡಂತೆ ಐಸ್ ಬಾಕ್ಸ್ ಹೊಂದಿರುವ ತ್ರಿಚಕ್ರ | (ಸಂಖ್ಯೆ) | 3.00 | 1.20 | 1.80 |



| ಕ್ರ.ಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| 49 | ಜೀವಂತ ಮೀನು ಮಾರಾಟ ಕೇಂದ್ರಗಳು | (ಸಂಖ್ಯೆ) | 20.00 | 8.00 | 12.00 |
| 50 | ಮೀನು ಆಹಾರ ತಯಾರಿಕಾ ಗಿರಣಿಗಳು | | | | |
| (ಎ) | ಉತ್ಪಾದನೆಯ ಮಿನಿ ಆಹಾರ ತಯಾರಿಕಾ ಗಿರಣಿಗಳು ದಿನಕ್ಕೆ 2 ಟನ್ ಸಾಮರ್ಥ್ಯ | (ಸಂಖ್ಯೆ) | 30.00 | 12.00 | 18.00 |
| (ಬಿ) | ಉತ್ಪಾದನೆಯ ಮಧ್ಯಮ ಗಿರಣಿಗಳು ದಿನಕ್ಕೆ 8 ಟನ್ ಸಾಮರ್ಥ್ಯ | (ಸಂಖ್ಯೆ) | 100.00 | 40.00 | 60.00 |
| (ಸಿ) | ಉತ್ಪಾದನೆಯ ದೊಡ್ಡ ಗಿರಣಿಗಳು ದಿನಕ್ಕೆ 20 ಟನ್ ಸಾಮರ್ಥ್ಯ | (ಸಂಖ್ಯೆ) | 200.00 | 80.00 | 120.00 |
| (ಡಿ) | ಮೀನು ಆಹಾರ ಉತ್ಪಾದನಾ ಗಿರಣಿ ದಿನಕ್ಕೆ ಕನಿಷ್ಠ 100 ಟನ್ ಸಾಮರ್ಥ್ಯ. | (ಸಂಖ್ಯೆ) | 650.00 | 260.00 | 390.00 |
| | **ಮೀನು ಮಾರುಕಟ್ಟೆಗಳು ಮತ್ತು ಮಾರಾಟ ಮೂಲಸೌಕರ್ಯ** | | | | |
| 51 | ಅಲಂಕಾರಿಕ ಮೀನು / ಅಕ್ವೇರಿಯಂ ಮಾರಾಟ ಮಳಿಗೆ ಸೇರಿದಂತೆ ಚಿಲ್ಲರೆ ಮೀನು ಮಾರಾಟ ಮಳಿಗೆಗಳ ನಿರ್ಮಾಣ. | (ಸಂಖ್ಯೆ) | 100.00 | 40.00 | 60.00 |
| 52 | ಅಲಂಕಾರಿಕ ಮೀನುಗಳ ಕಿಯೋಸ್ಕ್ ಸೇರಿದಂತೆ ಮೀನು ಕಿಯೋಸ್ಕ್‌ಗಳ ನಿರ್ಮಾಣ | (ಸಂಖ್ಯೆ) | 10.00 | 4.00 | 6.00 |





| ಕ್ರ.ಸಂ. | ಉಪ–ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| 53 | ಮೀನು ಮೌಲ್ಯ ವರ್ಧನೆ ಉದ್ಯಮ ಸ್ಥಾಪನೆ | (ಸಂಖ್ಯೆ) | 50.00 | 20.00 | 30.00 |
| 54 | ಮೀನು ಮತ್ತು ಮೀನುಗಾರಿಕೆ ಉತ್ಪನ್ನಗಳ ಇ–ವ್ಯಾಪಾರ ಮತ್ತು ಇ–ಮಾರುಕಟ್ಟೆಗಾಗಿ ಇ–ವೇದಿಕೆ (ಯೋಜನಾವರದಿ ಆಧಾರಿಸಿ ಘಟಕ ವೆಚ್ಚ ನಿರ್ಧರಿಸಲಾಗುವುದು | | | | |
| | **ಆಳ ಸಮುದ್ರದ ಮೀನುಗಾರಿಕೆಯ ಅಭಿವೃದ್ಧಿ** | | | | |
| 55 | ಸಾಂಪ್ರದಾಯಿಕ ಮೀನುಗಾರರಿಗೆ ಆಳ ಸಮುದ್ರ ಮೀನುಗಾರಿಕಾ ದೋಣಿಗಳನ್ನು ಪಡೆದುಕೊಳ್ಳಲು ಬೆಂಬಲ | (ಸಂಖ್ಯೆ) | 120.00 | 48.00 | 72.00 |
| 56 | ರಫ್ತು ಸಾಮರ್ಥ್ಯಕ್ಕಾಗಿ ಅಸ್ತಿತ್ವದಲ್ಲಿರುವ ಮೀನುಗಾರಿಕಾ ದೋಣಿಗಳ ಉನ್ನತೀಕರಣ | (ಸಂಖ್ಯೆ) | 15.00 | 6.00 | 9.00 |
| 57 | ಯಾಂತ್ರಿಕೃತ ಮೀನುಗಾರಿಕಾ ಹಡಗುಗಳಲ್ಲಿ ಜೈವಿಕ ಶೌಚಾಲಯಗಳ ಸ್ಥಾಪನೆ | (ಸಂಖ್ಯೆ) | 0.50 | 0.20 | 0.30 |



| ಕ್ರ.ಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| | **ಜಲಚರ ಆರೋಗ್ಯ ನಿರ್ವಹಣೆ** | | | | |
| 58 | ರೋಗ, ರೋಗನಿರ್ಣಯ ಮತ್ತು ಗುಣಮಟ್ಟದ ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆ | (ಸಂಖ್ಯೆ) | 25.00 | 10.00 | 15.00 |
| 59 | ರೋಗ, ರೋಗನಿರ್ಣಯ ಮತ್ತು ಗುಣಮಟ್ಟದ ಪರೀಕ್ಷೆ ಮೊಬೈಲ್ ಲ್ಯಾಬ್‌ಗಳು / ಚಿಕಿತ್ಸಾಲಯಗಳು | (ಸಂಖ್ಯೆ) | 35.00 | 14.00 | 21.00 |
| ಸಿ | **ಮೀನುಗಾರಿಕೆ ನಿರ್ವಹಣೆ ಮತ್ತು ನಿಯಂತ್ರಣ ವಿಧಿಗಳು** | | | | |
| | ನಿಗಾ, ನಿಯಂತ್ರಣ ಮತ್ತು ಕಣ್ಗಾವಲು (ಎಂಸಿಎಸ್) | | | | |
| 60 | ಸಾಂಪ್ರದಾಯಿಕ ಮತ್ತು ಯಾಂತ್ರಿಕೃತ ಹಡಗುಗಳಿಗೆ ಸಂವಹನ ಮತ್ತು / ಅಥವಾ ಟ್ರ್ಯಾಕಿಂಗ್ ಸಾಧನಗಳು | (ಸಂಖ್ಯೆ). | 0.35 | 0.14 | 0.21 |
| | **ಮೀನುಗಾರರ ಸುರಕ್ಷತೆ ಮತ್ತು ಸುರಕ್ಷತೆಯನ್ನು ಬಲಪಡಿಸುವುದು** | | | | |
| 61 | ಸಾಂಪ್ರದಾಯಿಕ ಮತ್ತು ಯಾಂತ್ರಿಕೃತ ಮೀನುಗಾರಿಕಾ ಹಡಗುಗಳ ಮೀನುಗಾರರಿಗೆ ಸುರಕ್ಷತಾ ಕಿಟ್‌ಗಳನ್ನು ಒದಗಿಸಲು ಬೆಂಬಲ (ಸಂವಹನ ಮತ್ತು / ಅಥವಾ ಟ್ರ್ಯಾಕಿಂಗ್ ಸಾಧನವನ್ನು ಹೊರತುಪಡಿಸಿ 10.1 ರಲ್ಲಿ ಉಲ್ಲೇಖಿಸಲಾಗಿದೆ) | | 1.00 | 0.40 | 0.60 |
| 62 | ಸಾಂಪ್ರದಾಯಿಕ ಮೀನುಗಾರರಿಗೆ ದೋಣಿಗಳು (ಬದಲಿ) ಮತ್ತು ಬಲೆಗಳನ್ನು ಒದಗಿಸುವುದು | (ಸಂಖ್ಯೆ). | 5.00 | 2.00 | 3.00 |
| 63 | ಸ್ಥಾಪನೆ ಮತ್ತು ನಿರ್ವಹಣೆಯ ವೆಚ್ಚ ಸೇರಿದಂತೆ ಪಿಎಫ್‌ಝಡ್ ಸಾಧನಗಳು ಮತ್ತು ನೆಟ್‌ವರ್ಕ್‌ಗಾಗಿ ಮೀನುಗಾರರಿಗೆ ಬೆಂಬಲ. | (ಸಂಖ್ಯೆ) | 0.110 | 0.044 | 0.066 |





| ಕ್ರ.ಸಂ. | ಉಪ-ಘಟಕ ಮತ್ತು ಚಟುವಟಿಕೆಗಳು | ಘಟಕ | ಘಟಕ ವೆಚ್ಚ (ರೂ. ಲಕ್ಷ) | ಸರ್ಕಾರದ ಸಹಾಯಧನ (ರೂ. ಲಕ್ಷ) | |
|---|---|---|---|---|---|
| | | | | ಸಾಮಾನ್ಯ (40%) | ಎಸ್‌ಸಿ /ಎಸ್‌ಟಿ/ ಮಹಿಳೆಯರಿಗೆ (60%) |
| | **ಮೀನುಗಾರಿಕೆ ವಿಸ್ತರಣೆ ಮತ್ತು ಬೆಂಬಲ ಸೇವೆಗಳು** | | | | |
| 64 | ವಿಸ್ತರಣೆ ಮತ್ತು ಬೆಂಬಲ ಸೇವೆಗಳು (ಮತ್ಸ್ಯ ಸೇವಾ ಕೇಂದ್ರ ಸ್ಥಾಪನೆ) | (ಸಂಖ್ಯೆ) | 25.00 | 10.00 | 15.00 |
| 65 | ಸಾಗರ ಮಿತ್ರರು | | ಸಾಗರ ಮಿತ್ರರಿಗೆ ಪ್ರೋತ್ಸಾಹದನವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ಪಿ.ಎಂ.ಎಂ.ಎಸ್.ವೈ ಕಾರ್ಯಸೂಚಿಗಳಲ್ಲಿ ನಮೂದಾಗಿರುವ ರೀತ್ಯಾ ಹಂಚಿಕೊಳ್ಳಲಾಗುವುದು | | |
| | **ಮೀನುಗಾರಿಕೆ ಹಡಗುಗಳು ಮತ್ತು ಮೀನುಗಾರರ ವಿಮೆ** | | | | |
| 66 | ಮೀನುಗಾರಿಕಾ ದೋಣಿಗಳಿಗೆ ವಿಮೆ | (ಸಂಖ್ಯೆ) | ಪ್ರೀಮಿಯಂ ಸಬ್ವೆನ್ಷನ್. ಪ್ರೀಮಿಯಂ ಮೊತ್ತವನ್ನು ಕೇಂದ್ರ, ರಾಜ್ಯಗಳು ಮತ್ತು ಫಲಾನುಭವಿಗಳ ಪಾಲನ್ನು ಪಿಎಂಎಂಎಸ್‌ವೈ ನ ಧನಸಹಾಯದ ಮಾದರಿಯಂತೆ ವಿತರಿಸಲಾಗುವುದು. | | |
| 67 | ಮೀನುಗಾರರಿಗೆ, ಮೀನು ಕೃಷಿಕರಿಗೆ ಮೀನುಗಾರಿಕೆ ಕಾರ್ಮಿಕರಿಗೆ ಮತ್ತು ಯಾವುದೇ ಇತರ ವರ್ಗ ನೇರವಾಗಿ ಮೀನುಗಾರಿಕೆ ಮತ್ತು ಸಂಬಂಧಿತ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವ್ಯಕ್ತಿಗಳಿಗೆ ವಿಮೆ | (ಸಂಖ್ಯೆ) | ಸಂಪೂರ್ಣ ಪ್ರೀಮಿಯಂ ಮೊತ್ತವನ್ನು ಕೇಂದ್ರ ಮತ್ತು ರಾಜ್ಯಗಳ ಪಾಲನ್ನು ಪಿಎಂಎಂಎಸ್‌ವೈ ನ ಧನ ಸಹಾಯದ ಮಾದರಿಯಂತೆ ಅನುಷ್ಠಾನಗೊಳಿಸಲಾಗುವುದು | | |
| | **ಮೀನುಗಾರಿಕೆ ಸಂಪನ್ಮೂಲಗಳ ಸಂರಕ್ಷಣೆಗಾಗಿ ಮೀನುಗಾರರಿಗೆ ಜೀವನೋಪಾಯ ಮತ್ತು ಪೌಷ್ಠಿಕಾಂಶದ ಬೆಂಬಲ** | | | | |
| 68 | ಮೀನುಗಾರಿಕೆ ನಿಷೇಧ / ನೇರ ಅವಧಿಯಲ್ಲಿ ಮೀನುಗಾರಿಕೆ ಸಂಪನ್ಮೂಲಗಳ ಸಂರಕ್ಷಣೆಗಾಗಿ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಸಕ್ರಿಯ ಸಾಂಪ್ರದಾಯಿಕ ಮೀನುಗಾರರ ಕುಟುಂಬಗಳಿಗೆ ಜೀವನೋಪಾಯ ಮತ್ತು ಪೌಷ್ಠಿಕಾಂಶದ ಬೆಂಬಲ. | (ಸಂಖ್ಯೆ) | ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ | | |

| ರಾಜ್ಯ/ಕೇಂದ್ರಾಡಳಿತ ಪ್ರದೇಶ | ಧನಸಹಾಯ ಮಾದರಿ | ಪಾಲು |
|---|---|---|
| ಸಾಮಾನ್ಯ ರಾಜ್ಯಗಳು | 50:50 ಕೇಂದ್ರ ಮತ್ತು ರಾಜ್ಯಗಳು | ಕೇಂದ್ರದ ಪಾಲು ರೂ 1500 + ರಾಜ್ಯದ ಪಾಲು ರೂ 1500 + ಫಲಾನುಭವಿಯ ಪಾಲು ರೂ.1500 = ಪ್ರತಿ ವರ್ಷಕ್ಕೆ ರೂ 4500 |
| ಈಶಾನ್ಯ ಮತ್ತು ಹಿಮಾಲಯನ್ ರಾಜ್ಯಗಳು | 80:20 ಕೇಂದ್ರ ಮತ್ತು ಈಶಾನ್ಯ ಮತ್ತು ಹಿಮಾಲಯನ್ ರಾಜ್ಯಗಳು | ಕೇಂದ್ರದ ಪಾಲು ರೂ 2400 + ರಾಜ್ಯದ ಪಾಲು ರೂ 600 + ಫಲಾನುಭವಿಯ ಪಾಲು ರೂ.1500 = ಪ್ರತಿ ವರ್ಷಕ್ಕೆ ರೂ 4500 |
| ಕೇಂದ್ರಾಡಳಿತ ಪ್ರದೇಶಗಳು | 100% ಕೇಂದ್ರದ ಪಾಲು | ಕೇಂದ್ರದ ಪಾಲು ರೂ 3000 + ಫಲಾನುಭವಿಯ ಪಾಲು ರೂ 1500 = ಪ್ರತಿ ವರ್ಷಕ್ಕೆ ರೂ 4500 |

## 7. ಪ್ರಸ್ತಾವನೆಯ ಸಲ್ಲಿಕೆ

7.1 ಪಿಎಂಎಂಎಸ್‌ವೈನ ಕೇಂದ್ರ ಪುರಸ್ಕೃತ ಉಪ–ಯೋಜನೆ

7.1.1 ರಾಜ್ಯಗಳು / ಕೇಂದ್ರಾಡಳಿತ ಪ್ರದೇಶಗಳು / ಅಂತಿಮ ಅನುಷ್ಠಾನ ಏಜೆನ್ಸಿಗಳು ತಮ್ಮ ಸ್ವಯಂ ವೇದ್ಯ ಪ್ರಸ್ತಾವನೆ / ವಿವರವಾದ ಯೋಜನಾ ವರದಿಯ (ಡಿಪಿಆರ್) ಮೂರು ಪ್ರತಿಗಳನ್ನು ಸಲ್ಲಿಸಬೇಕಾಗುತ್ತದೆ. ಇದರಲ್ಲಿ ಎನ್‌ಎಫ್‌ಡಿಬಿಗೆ ನೇರವಾಗಿ ಎರಡು ಪ್ರತಿಗಳು ಮತ್ತು ಮೀನುಗಾರಿಕೆ ಇಲಾಖೆ, ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ, ಭಾರತ ಸರ್ಕಾರ ಇಲ್ಲಿಗೆ ಒಂದು ಮುಂಗಡ ಪ್ರತಿಯನ್ನು ಸಲ್ಲಿಸಬೇಕಿರುತ್ತದೆ.



7.1.2 ಸ್ವಯಂ ವೇದ್ಯ ಪ್ರಸ್ತಾವನೆ / ವಿವರವಾದ ಯೋಜನಾ ವರದಿಯ (ಡಿಪಿಆರ್) ಎರಡು ಪ್ರತಿಗಳನ್ನು ಕೆಳಗಿನ ಎನ್.ಎಫ್.ಡಿ.ಬಿ ವಿಳಾಸಕ್ಕೆ ಸಲ್ಲಿಸಬೇಕಿರುತ್ತದೆ.

**ಮುಖ್ಯ ಕಾರ್ಯನಿರ್ವಾಹಕರು,**
ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿ,
ಮೀನುಗಾರಿಕೆ ಇಲಾಖೆ,
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ,
ಭಾರತ ಸರ್ಕಾರ,
ಪಿಲ್ಲರ್ ಸಂಖ್ಯೆ: 235, ಪಿವಿಎನ್‌ಆರ್ ಎಕ್ಸ್‌ಪ್ರೆಸ್ ವೇ,
ಎಸ್‌ವಿಪಿಎನ್‌ಪಿಎ ಪೋಸ್ಟ್, ಹೈದರಾಬಾದ್ –500052
(Fax: 040–24015568/24015552)
(E-mail: cenfdb@gmail.com/info.nfdb@nic.in)

7.1.3 ಸ್ವಯಂ ವೇದ್ಯ ಪ್ರಸ್ತಾವನೆ / ವಿವರವಾದ ಯೋಜನಾ ವರದಿಯ (ಡಿಪಿಆರ್) ಮುಂಗಡ ಪ್ರತಿಯನ್ನು ಕೆಳಗಿನ ವಿಳಾಸಕ್ಕೆ ಸಲ್ಲಿಸಬೇಕಿರುತ್ತದೆ.

**ಕಾರ್ಯದರ್ಶಿ**
ಮೀನುಗಾರಿಕೆ ಇಲಾಖೆ,
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ,
ಭಾರತ ಸರ್ಕಾರ
ಕೊಠಡಿ ಸಂಖ್ಯೆ – 221, ಕೃಷಿ ಭವನ,
ನವದೆಹಲಿ– 110001
(E-mail: secy-fisheries@gov.in)



## 7.2 ಪಿಎಂಎಂಎಸ್‌ವೈನ ಕೇಂದ್ರ ವಲಯ ಉಪ–ಯೋಜನೆ

7.2.1 ಪಿಎಂಎಂಎಸ್‌ವೈನ ಕೇಂದ್ರ ವಲಯ ಉಪ–ಯೋಜನೆಗೆ ಸಂಬಂಧಿಸಿದ ಯೋಜನೆಗಳ ಪ್ರಸ್ತಾವನೆಗಳನ್ನು ಮೇಲಿನ ಪ್ಯಾರಾ 7.1.3 ರಲ್ಲಿ ನಮೂದಾಗಿರುವ ವಿಳಾಸಕ್ಕೆ ಸಲ್ಲಿಸಬೇಕಿರುತ್ತದೆ.

## 8. ಸಂಪರ್ಕದ ವಿವರಗಳು

8.1 ಮೀನುಗಾರಿಕೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಫಲಾನುಭವಿಗಳು ತಮ್ಮ ಸ್ವಯಂ ವೇದ್ಯ ಪ್ರಸ್ತಾವನೆ / ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ಪಿಎಂಎಂಎಸ್‌ವೈನ ಕಾರ್ಯಾಚರಣಾ ಮಾರ್ಗಸೂಚಿಗಳಿಗೆ ಅನುಸಾರವಾಗಿ ತಾವು ವಾಸವಿರುವ ಮೀನುಗಾರಿಕಾ ಜಿಲ್ಲೆಯ ಜಿಲ್ಲಾ ಮೀನುಗಾರಿಕಾ ಅಧಿಕಾರಿ ಅಥವಾ ಅವರು ಘಟಕ ಸ್ಥಾಪಿಸಲು ಉದ್ದೇಶಿಸಿರುವ ಜಿಲ್ಲೆಯ ಜಿಲ್ಲಾ ಮೀನುಗಾರಿಕಾ ಅಧಿಕಾರಿಯನ್ನು ಸಂಪರ್ಕಿಸಿ ಪಿಎಂಎಂಎಸ್ ಯೋಜನೆಯಡಿ ಪ್ರಸ್ತಾವನೆ ಸಲ್ಲಿಸುವ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

8.2 ಪಿಎಂಎಂಎಸ್‌ವೈ ಕುರಿತು ಹೆಚ್ಚಿನ ಮಾಹಿತಿಗಾಗಿ, ಪಾಲುದಾರರು (ಉದ್ದೇಶಿತ ಫಲಾನುಭವಿಗಳು) ಈ ಕೆಳಗಿನ ವೆಬ್ ಸೈಟ್ ವಿಳಾಸಗಳಲ್ಲಿ ಉಲ್ಲೇಖಿಸಿರುವ ಮತ್ತು ಅಪ್‌ಲೋಡ್ ಮಾಡಿರುದ ವಿವರವಾದ ಪಿಎಂಎಂಎಸ್‌ವೈ ಕಾರ್ಯಾಚರಣಾ ಮಾರ್ಗಸೂಚಿಗಳು ಅವಗಾಹಿಸಬಹುದಾಗಿದೆ
i) www.dof.gov.in ಮತ್ತು ii) www.nfdb.gov.in



**8.3 ಕಡಲ ಮೀನುಗಾರಿಕೆ ಮತ್ತು ಅಲಂಕಾರಿಕ ಮೀನುಗಾರಿಕೆಗೆ ಸಂಬಂಧಿಸಿದ ಪ್ರಶ್ನೆಗಳು**

ಡಾ.ಸಂಜಯ್ ಪಾಂಡೆ,
ಸಹಾಯಕ ಆಯುಕ್ತರು (ಮೀನುಗಾರಿಕೆ) ಮೀನುಗಾರಿಕೆ ಇಲಾಖೆ,
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ
ಕೊಠಡಿ ಸಂಖ್ಯೆ 479, ಕೃಷಿ ಭವನ, ನವದೆಹಲಿ 110 001
E-mail : sanjay.rpandey@gov.in

**8.4 ಒಳನಾಡು ಮೀನುಗಾರಿಕೆ ಮತ್ತು ಮೀನು ಹಿಡುವಳಿ ನಂತರದ ಚಟುವಟಿಕೆಗಳಿಗೆ ಸಂಬಂಧಿತ ಪ್ರಶ್ನೆಗಳು**

ಶ್ರೀ. ರಾಕೇಶ್ ಕುಮಾರ್,
ಸಹಾಯಕ ಆಯುಕ್ತರು (ಮೀನುಗಾರಿಕೆ) ಮೀನುಗಾರಿಕೆ ಇಲಾಖೆ,
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ
ಕೊಠಡಿ ಸಂಖ್ಯೆ 490, ಕೃಷಿ ಭವನ, ನವದೆಹಲಿ 110 001
E-mail : rakesh.kr38@gov.in

8.5 ಮೀನುಗಾರಿಕೆಗೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳಿಗೆ ಹೈದರಾಬಾದ್ ನಲ್ಲಿ ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ (ಎನ್.ಎಫ್.ಡಿ.ಬಿ) ಮೂಲಕ ಕಾರ್ಯನಿರ್ವಹಿಸಲ್ಪಡುತ್ತಿರುವ ಟೋಲ್ ಫ್ರೀ ಸಂಖ್ಯೆ **1800–425–1660** ನ್ನು ಸಂಪರ್ಕಿಸಬಹುದಾಗಿರುತ್ತದೆ.




# ಟಿಪ್ಪಣಿಗಳು

## ಟಿಪ್ಪಣಿಗಳು









ಭಾರತ ಸರ್ಕಾರ
ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ
ಮೀನುಗಾರಿಕೆ ಇಲಾಖೆ